ಪೋಲೀಸರನ್ನು ಕಾಂಟ್ಯಾಕ್ಟ್ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯ ಒಬ್ಬ ಅಧಿಕಾರಿಯೂ ಮಾತನಾಡಲು ಸಿದ್ಧರಿಲ್ಲ. ಅಷ್ಟೂ ಜನರು ಇದನ್ನು ಒಂದು ಪ್ರೆಸ್ಟೀಜ್ ಎಂದು ತಿಳಿದುಕೊಂಡು, ಗುಂಡಿ ತೆಗೆದುದನ್ನು ಮುಚ್ಚುತ್ತಿದ್ದಾರಲ್ಲ ಎಂದು ತಲೆ ಹೊಡೆಯುವಂಥ ಕೆಲಸ ಮಾಡುವುದಾದರೆ ಇದನ್ನು ಟಾಲರೇಟ್ ಮಾಡಲು ನಾವು ಸಿದ್ಧವಿಲ್ಲ.

(ಈ ಹಂತದಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು ಮತ್ತು ಯಡಿಯೂರಪ್ಪನವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ :— ಒಂದು ಕಡೆ, ಇಡೀ ರಾಜ್ಯಾದ್ಯಾಂತ ನಡೆಯುತ್ತಿರತಕ್ಕಂಥ ಜಮೀನು ಒತ್ತುವರಿಯನ್ನು ಬಿಟ್ಟು ಬಿಡುತ್ತಾರೆ. ಮತ್ತೊಂದು ಕಡೆ ಉಳುಮೆ ಮಾಡುತ್ತಿರುವಂಥ ಬಡವರನ್ನು ಒಕ್ಕಲೆಬ್ಬಿಸಿ ಅಲ್ಲಿ ಗುಂಡಿ ತೆಗೆಯತಕ್ಕಂಥಾದ್ದು ನಿರಂತರವಾಗಿ ನಡೆದಿದೆ. ನೂರಾರು ಎಕರೆಯನ್ನು ಅಕ್ರಮವಾಗಿ ಇಟ್ಟುಕೊಂಡಿರುವವರನ್ನು ಬಿಡಿಸಲು ಇವರ ಕೈಯ್ಯಲ್ಲಿ ಆಗುತ್ತಿಲ್ಲ; ಗುಂಡಿ ತೆಗೆಯುತ್ತಿರುವಂಥ ಬಡವರ ಮೇಲೆ ಧಾಳಿ ಮಾಡತಕ್ಕಂಥಾದ್ದು ಇಡೀ ಕರ್ನಾಟಕ ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿದೆ. ಆ ಬಡವರಿಗೆ ರಕ್ಷಣೆ ಕೊಡುವಲ್ಲಿ ಸರ್ಕಾರ ವಿಫಲವಾಗಿದೆ, ಮಂತ್ರಿಗಳು ಸಹ ವಿಫಲರಾಗಿದ್ದಾರೆ. ಇದು ಸರಿಯಲ್ಲ, ನಾನೂ ಧರಣಿ ಮಾಡುತ್ತೇನೆ, ನನ್ನ ಕ್ಷೇತ್ರದಲ್ಲೂ, ಇದು ನಡೆದಿದೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ಕೆ. ಪುಟ್ಟಣ್ಣಯ್ಯ :— ಇಡೀ ರಾಜ್ಯಾದ್ಯಂತ ಇದು ನಡೆಯುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ರಾಜ್ಯದಲ್ಲಿ ಎಲ್ಲಾ ಕಡೆ ಉತ್ತಿರತಕ್ಕಂಥ ಜಮೀನುಗಳಿಗೆ ಹೋಗಿ ಗುಂಡಿ ಹೊಡೆಯತಕ್ಕಂಥ ಕೆಲಸವನ್ನು ಇವರು ಮಾಡುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್ (ಮಾನ್ಯ ಅರಣ್ಯ ಸಚಿವರು) :— ಇವರು ಗುಂಡಿ ಹೊಡೆಯುವುದೂ ಬೇಡ, ಅವರು ಅಲ್ಲಿಗೆ ಬರುವುದೂ ಬೇಡ. ಈಗ ಸದ್ಯಕ್ಕೆ ಅವರೂ ಪ್ರವೇಶ ಮಾಡುವುದು ಬೇಡ, ನಮ್ಮವರೂ ಪ್ರವೇಶ ಮಾಡುವುದು ಬೇಡ ಎಂದು ಆದೇಶ ಕೊಟ್ಟಿದ್ದೇವೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡಿದರು)

ಶ್ರೀ ಡಿ. ಮಂಜುನಾಥ್ :— ಇವತ್ತು ನಮಗೆ ಬಂದಿರುವ ಸಮಸ್ಯೆಯ ಬಗ್ಗೆ ನಾನು ಹೇಳುತ್ತಿದ್ದೇವೆ. ಇಲ್ಲಿ ನಿಂತು ಮಾತನಾಡಬಾರದು. ಬೇಕಾದರೆ ಅವರು ಅಲ್ಲಿ ಅವರ ಸೀಟಿಗೆ ಹೋಗಿ ಮಾತನಾಡಲಿ.